imma™


# Vijay Karnataka

## Metro Rail Station Project

**Date: 16-04-2010 | Edition: Bangalore | Page: 3 | Source: Bureau | Clip size (cm): W: 8 H: 26**

**Clip: 1 of 1**


# ಮೆಟ್ರೊ ರೈಲು ನಿಲ್ದಾಣ ನಿರ್ಮಾಣಕ್ಕೆ ಶಂಕುಸ್ಥಾಪನೆ



**ಮೆಟ್ರೊ ರೈಲು ಯೋಜನೆಯ ಮೊದಲ ಸ್ಟೇಷನ್ ನಿರ್ಮಾಣಕ್ಕೆ ಮುಖ್ಯಮಂತ್ರಿ ಯಡಿಯೂರಪ್ಪ ಗುರುವಾರ ಶಂಕುಸ್ಥಾಪನೆ ನೆರವೇರಿಸಿದರು.**

**ವಿಕ ಸುದ್ದಿಲೋಕ** ಬೆಂಗಳೂರು

ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಾಣಗೊಳ್ಳಲಿರುವ ಬೆಂಗಳೂರು ಮೆಟ್ರೊ ರೈಲು ಯೋಜನೆಯ ಮೊದಲ ಸ್ಟೇಷನ್ ನಿರ್ಮಾಣಕ್ಕೆ ಮುಖ್ಯಮಂತ್ರಿ ಯಡಿಯೂರಪ್ಪ ಗುರುವಾರ ಶಂಕುಸ್ಥಾಪನೆ ನೆರವೇರಿಸಿದರು.

ಬೆಂಗಳೂರು ಮೆಟ್ರೊ ರೈಲು ನಿಗಮ ಹಾಗೂ ಮಂತ್ರಿ ಇನ್‌ಫ್ರಾಸ್ಟ್ರಕ್ಚರ್ ಎಂಬ ಖಾಸಗಿ ಕಂಪನಿ ಸಹಭಾಗಿತ್ವದಲ್ಲಿ ಮಲ್ಲೇಶ್ವರದ ಸಂಪಿಗೆ ರಸ್ತೆ ಸ್ವಸ್ತಿಕ್ ಬಳಿ ರೈಲು ನಿಲ್ದಾಣ ನಿರ್ಮಾಣವಾಗಲಿದೆ. ಅದಕ್ಕಾಗಿ ನಿಗಮವು ಕಂಪನಿಗೆ ಐದು ಎಕರೆ ಜಮೀನು ನೀಡಿದೆ. ಮಂತ್ರಿ ಇನ್‌ಫ್ರಾಸ್ಟ್ರಕ್ಚರ್ ಸುಮಾರು 36 ಕೋಟಿ ರೂ. ವೆಚ್ಚದಲ್ಲಿ 8,000 ಚದರ ಅಡಿ ವಿಸ್ತೀರ್ಣದಲ್ಲಿ ನಿಲ್ದಾಣ ನಿರ್ಮಿಸಲಿದೆ. 20 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ.

ಶಂಕುಸ್ಥಾಪನೆ ನಂತರ ಮಾತನಾಡಿದ ಯಡಿಯೂರಪ್ಪ, ಖಾಸಗಿ ಸಹಭಾಗಿತ್ವದಿಂದ ರೈಲು ನಿಲ್ದಾಣ ನಿರ್ಮಾಣದ ವೆಚ್ಚ ಕಡಿಮೆಯಾಗಲಿದೆ. ಇದೇ ಮಾದರಿಯಲ್ಲಿ ಬಿಡಿಎ, ಬಿಬಿಎಂಪಿ, ಜಲ ಮಂಡಳಿ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕು. ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದಮೇಲೆ ಮೆಟ್ರೊ ರೈಲು ಕಾಮಗಾರಿಯ ಶೇ.22ರಷ್ಟು ಭಾಗ ಪೂರ್ಣಗೊಂಡಿದೆ. ಚಿನ್ನಸ್ವಾಮಿ ಸ್ಟೇಡಿಯಂ-ಬೈಯಪ್ಪನಹಳ್ಳಿ ನಡುವಿನ 7 ಕಿ.ಮೀ. ಮಾರ್ಗ ವರ್ಷದ ಅಂತ್ಯಕ್ಕೆ ಸಂಚಾರ ಆರಂಭಿಸಲಿದೆ. 2013ರ ವೇಳೆಗೆ ಒಟ್ಟು 44 ಕಿ.ಮೀ. ಮೆಟ್ರೊ ರೈಲು ಮಾರ್ಗ ಪೂರ್ಣಗೊಳ್ಳಲಿದೆ ಎಂದು ಹೇಳಿದರು.

ಬೆಂಗಳೂರಿನಲ್ಲಿ ಹೊರ ವರ್ತುಲ ರೈಲು ಯೋಜನೆ ಆರಂಭಕ್ಕೆ ಸರಕಾರ ಚಿಂತನೆ ನಡೆಸಿದೆ. ಈಗಾಗಲೇ ಯೋಜನಾ ವೆಚ್ಚದ ಶೇ.50ರಷ್ಟು ಭರಿಸಲು ಸರಕಾರ ಸಿದ್ಧವಿದೆ. ಈ ಸಂಬಂಧ ಕೇಂದ್ರ ಸರಕಾರ ತನ್ನ ನಿಲುವು ಪ್ರಕಟಿಸಬೇಕು ಎಂದರು.

ಸಂಸದ ಪಿ.ಸಿ. ಮೋಹನ್, ಶಾಸಕರಾದ ಅಶ್ವತ್ಥನಾರಾಯಣ, ದಿನೇಶ್ ಗುಂಡೂರಾವ್, ಮಂತ್ರಿ ಡೆವಲಪರ್ಸ್‌ನ ಸುನಿಲ್ ಮಂತ್ರಿ, ಮೆಟ್ರೊ ರೈಲು ನಿಗಮದ ವ್ಯವಸ್ಥಾಪಕ ನಿರ್ದೇಶಕ ಶಿವ ಶೈಲಂ ಭಾಗವಹಿಸಿದ್ದರು.

**ಎಲ್ಲವೂ ಗೋಪ್ಯ:** ಮೊದಲ ಬಾರಿಗೆ ಬೆಂಗಳೂರು ಮೆಟ್ರೊ ರೈಲು ನಿಗಮವು ಸ್ವಸ್ತಿಕ್ ನಿಲ್ದಾಣದ ನಿರ್ಮಾಣ ಕಾರ್ಯವನ್ನು ಖಾಸಗಿ ಕಂಪನಿಗೆ ವಹಿಸಿದೆ. ಆದರೆ, ನಿಗಮ ಮತ್ತು ಮಂತ್ರಿ ಡೆವಲಪರ್ಸ್ ನಡುವೆ ಆಗಿರುವ ಈ ಒಪ್ಪಂದ ನಾನಾ ಅನುಮಾನಗಳಿಗೆ ಎಡೆಮಾಡಿದೆ. ಏಕೆಂದರೆ ಈ ಒಪ್ಪಂದವನ್ನು ನಿಗಮವು ಬಹಳ ರಹಸ್ಯವಾಗಿರಿಸಿದ್ದು, ಆ ಬಗ್ಗೆ ಯಾವುದೇ ಮಾಹಿತಿ ಬಹಿರಂಗಪಡಿಸುತ್ತಿಲ್ಲ.

ಮೈಸೂರು ಮಿಲ್ಸ್‌ಗೆ ಸೇರಿದ್ದ 24 ಎಕರೆ ಜಮೀನನ್ನು ಮಂತ್ರಿ ಡೆವಲಪರ್ಸ್ ಖರೀದಿಸಿತ್ತು. ನಂತರ ಸ್ಟೇಷನ್ ನಿರ್ಮಾಣಕ್ಕೆಂದು ಮೆಟ್ರೊ ರೈಲು ನಿಗಮವು 2005ರಲ್ಲಿ ಮಂತ್ರಿಯಿಂದ ಐದು ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡಿತ್ತು.

**ಜೆಡಿಎಸ್ ಪ್ರತಿಭಟನೆ:** ಸ್ಟೇಷನ್ ಶಂಕುಸ್ಥಾಪನೆ ಕಾರ್ಯಕ್ರಮಕ್ಕೆ ಸಂಸದ ಎಚ್.ಡಿ. ಕುಮಾರಸ್ವಾಮಿಯನ್ನು ಆಹ್ವಾನಿಸಿಲ್ಲ ಎಂದು ಜೆಡಿಎಸ್ ಕಾರ್ಯಕರ್ತರು ಸಮಾರಂಭದ ಬಳಿಕ ಕಪ್ಪು ಬಾವುಟ ಪ್ರದರ್ಶಿಸಿ ಪ್ರತಿಭಟಿಸಿದರು.